ದಿಃ 08.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 10ನೇ ಪ್ರತಿವಾದಿ ಪರ ಶ್ರೀ ಎಸ್ ಪಿ ವಕೀಲರಿಂದಃ

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ದಾವೆ ದಾಖಲು ಮಾಡಿದಾಗಿನಿಂದಲೂ ಇಂದಿನವರೆಗೂ ಬೆಂಗಳೂರಿನ ವಿಳಾಸದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ಅರಸೀಕೆರೆಯ ಶಿವಾನಂದ ಕಾಲೋನಿಯಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ. ಶಿವಾನಂದ ಕಾಲೋನಿಯಲ್ಲಿ ಸಂಬಂಧಿಕರ ಮನೆಯಲ್ಲಿ ಸ್ವಲ್ಪ ಕಾಲದ ಮಟ್ಟಿಗೆ ಉಳಿದುಕೊಂಡಿರುತ್ತೇನೆ. 1981 ರಿಂದ 2010 ರವರೆಗೆ ಡಿ ಎಂ ಕುರ್ಕೆ ಗ್ರಾಮದಲ್ಲಿ ವಾಸವಿರುವ ಕುರಿತು ಆದಾರ್ ಕಾರ್ಡ್ ಅಥವಾ ರೇಶನ್ ಕಾರ್ಡ್ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ವಿವಾಹವಾದ 20 ದಿನಗಳ ನಂತರ ನಾನು ಡಿ ಎಂ ಕುರ್ಕೆ ಗ್ರಾಮದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. 7 ವರ್ಷ ಅದೇ ಗ್ರಾಮದಲ್ಲಿ ವಾಸವಿದ್ದೆನು. ಎಷ್ಟು ಸರ್ವೆ ನಂಬರ್ ಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ ಎಂಬುದು ನನಗೆ ಗೊತ್ತು. 2 ನೇ ಪ್ರತಿವಾದಿಯನ್ನು ಅರಳಪ್ಪ ಎಂಬುವವರು ದತ್ತು ತೆಗೆದುಕೊಂಡಿದ್ದ ರೀತ್ಯಾ ದಾವಾಸ್ವತ್ತುಗಳು 2 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಿಃ 07-05-1956 ರ ಪತ್ರವು ದತ್ತು ಪತ್ರವಾಗಿದ್ದು ನೊಂದಾಯಣಿ ಆಗಿರುತ್ತದೆ ಎಂದು ನಿಡಿ 1 ತೋರಿಸಲಾಗಿ ಸಾಕ್ಷಿಯು ಸದರಿ ದಾಖಲಾತಿಯು ಸುಳ್ಳು ಸೃಷ್ಟನೆಯ ದಾಖಲಾತಿ ಎಂದು ನುಡಿಯುತ್ತಾರೆ. ನಿಡಿ 8 ರಂತೆ ದಿಃ 16.10.1973 ರ ಮ್ಯುಟೇಶನ್ ರಿಜಿಸ್ಟರ್ ಪ್ರತಿಯಲ್ಲಿ 2 ನೇ ಪ್ರತಿವಾದಿ ಯ ದತ್ತು ತಂದೆಯಾದ ಅರಳಪ್ಪರವರಿಂದ ದಾವಾಸ್ವತ್ತುಗಳು 2 ನೇ ಪ್ರತಿವಾದಿಗೆ ಖಾತೆ ವರ್ಗಾವಣೆ ಆಗಿರುವುದು ಕಂಡು ಬರುತ್ತದೆ ಎಂದರೆ ಸದರಿ ದಾಖಲಾತಿಯು ಸುಳ್ಳು ಸೃಷ್ಟನೆಯ ದಾಖಲಾತಿ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 1 ನ್ನು 1ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ರತ್ನಮ್ಮ ಮೈನರ್ ಮಗಳಾದ ಡಿ.ಆರ್ ಅಂಬಿಕಾ ರವರ ಪರವಾಗಿ ಅವರ ತಂದೆ 1ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ದಿಃ09.08.2002 ರ ಕ್ರಯ ಪತ್ರದಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ನನ್ನ ಗಂಡ ಆದರೆ ರತ್ನಮ್ಮ ಮತ್ತು ಅಂಬಿಕಾ ಯಾರು ಎಂಬುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2002 ರಲ್ಲಿ ದಾವಾ ಐಟಂ ನಂ. 1

ನ್ನು ಮಾರಾಟವಾಗಿರುವ ಕುರಿತು ತಿಳಿದಿದ್ದರೂ ಸಹಾ ಈವರೆಗೂ ಆ ಕುರಿತು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು 2010 ರವರೆಗೆ ಫ್ಯಾಮಿಲಿ ಕೋರ್ಟ್ ನಲ್ಲಿ ಪ್ರಕರಣ ನಡೆಯುತ್ತಿದ್ದು 2010 ರಲ್ಲಿ ನನ್ನ ಮಗಳು ಸ್ವತ್ತುಗಳ ಕುರಿತು ಸದರಿ ದಾವೆಯನ್ನು ದಾಖಲಿಸಿರುತ್ತಾಳೆ ಎಂದು ನುಡಿಯುತ್ತಾರೆ.

ತನ್ನ ದತ್ತು ತಂದೆಯಿಂದ ಬಂದಂತಹ ಐಟಂ ನಂ. 1ರ ಸ್ವತ್ತನ್ನು 2ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ , 1ನೇ ಪ್ರತಿವಾದಿಯ ಜೀವನ ನಿರ್ವಹಣೆಗಾಗಿ ಹಿಸ್ಸೆಯಂತೆ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ 1 ನೇ ಪ್ರತಿವಾದಿಯು ನನ್ನನ್ನು ಬಿಟ್ಟು ದಾವಾ ಐಟಂ ನಂ. 1 ನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 2002 ರಿಂದ ಅಂದರೆ ಖರೀದಿ ಮಾಡಿದ ದಿನದಿಂದಲೂ ಇಂದಿನವರೆಗೂ ದಾವಾ ಐಟಂ ನಂ.1 ರಲ್ಲಿ 10 ನೇ ಪ್ರತಿವಾದಿ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.1 ನ್ನು ಹೊರತು ಪಡಿಸಿ 1 ನೇ ಪ್ರತಿವಾದಿಗೆ ಇನ್ನೂ ಹಲವಾರು ಸ್ವತ್ತುಗಳು ಇರುತ್ತವೆ ಎಂದರೆ ಸರಿಯಲ್ಲ.

ನಾನು 1 ನೇ ಪ್ರತಿವಾದಿಯ ಹೆಂಡತಿ ಅಲ್ಲದಿದ್ದರೂ ಸಹಾ ದಾವಾಸ್ವತ್ತುಗಳ ಅಕ್ರಮ ಪಾಯಿದೆ ಹೊಂದುವ ಸಲುವಾಗಿ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ ಸಹಾ ಕೆಲವು ಆಸ್ತಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿನಲ್ಲಿ ಸ.ನಂ.228/6 ರಲ್ಲಿ 11 ಗುಂಟೆ ಜಮೀನು, ಸ.ನಂ.242/6 ರಲ್ಲಿ 30 ಗುಂಟೆ ಹಾಗೂ ಒಂದು ಕರಿಹೆಂಚಿನ ಮನೆ ಪೂರ್ವ-ಪಶ್ಚಿಮ 12 ಅಡಿ ಉ-ದ 16 ಅಡಿ ಈಗಲೂ ಮುಂದುವೆರದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಸಾ ಓ ಹೇ ಕೇ ಸ ಇ ಒ

(ಶ್ರೀಮತಿ ಮಮತ.ಪಿ.)
ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಅರಸೀಕೆರೆ.